**ಸಿ.ಸಿ.ನಂಬರ್‌:475/2014**
**ಪಿಡಬ್ಲ್ಯೂ: 4**

ಇಂದು ದಿನಾಂಕ:**03.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಆರೋಪಿ ಪರ ಶ್ರೀ ಕೆ.ಎಸ್.ಎ., ವಕೀಲರಿಂದ:

1. ನನ್ನ ಕಾರ್ಯ ಅವಧಿಯಲ್ಲಿ ಪ್ರತಿ ಮನೆಗೆ ಹೋಗಿ ಶುಲ್ಕ ವಸೂಲಾತಿ ಮಾಡುತ್ತೇವೆ ಮತ್ತು ಕೆಲವೊಂದು ಬಾರಿ ಕಛೇರಿಯಲ್ಲಿ ಕುಳಿತು ಕೆಲಸ ಮಾಡುತ್ತೇವೆ. ಪಂಚಾಯತಿಯಲ್ಲಿ ಅನುಭೋಗದ ಆಧಾರದ ಮೇಲೆ ಹಾಗೂ ಹಕ್ಕುಪತ್ರದ ಆಧಾರದ ಮೇಲೆ 2 ರೀತಿಯ ಖಾತೆಗಳನ್ನು ನಿರ್ವಹಿಸುತ್ತಾರೆ ಅಂದರೆ ಸಾಕ್ಷಿಯು ಅನುಭೋಗದ ಆಧಾರದ ಮೇಲೆ ಕೇವಲ ಡಿಮ್ಯಾಂಡ್ ಎಕ್ಸ್ಟ್ರಾಕ್ಟ್ ನಲ್ಲಿ ಕರ ವಸೂಲಾತಿಗಾಗಿ ನಿರ್ವಹಿಸುತ್ತಾರೆ ಎಂದು ನುಡಿಯುತ್ತಾರೆ. 1995-96 ನೇ ಸಾಲಿನಿಂದಲೇ ನಾನು ಆರೋಪಿಯಿಂದ ಸ್ವತ್ತಿನ ಕರವನ್ನು ವಸೂಲಿ ಮಾಡುತ್ತಿದ್ದೆ ಅಂದರೆ ನನಗೆ ಈಗ ನೆನಪಿಲ್ಲ. ಆರೋಪಿ ಮತ್ತು ಚಾಸಾ-3 ರವರ ಹೆಸರಿಗೆ 2 ಆಸ್ತಿಗಳಿಗೆ ಪ್ರತ್ಯೇಕ ಖಾತೆ ಇತ್ತು ಅಂದರೆ ನನಗೆ ನೆನಪಿಲ್ಲ. ನಿಡಿ-2 ರ ಚೆಕ್ಕುಬಂದಿಯಲ್ಲಿ ಅಳಿಸಿ ಹಾಕಿ ಪಶ್ಚಿಮದ ದಿಕ್ಕಿನ ಚೆಕ್ಕುಬಂದಿಯನ್ನ ಬೇರೆ ಬರೆದಿರುವುದು ಕಾಣುತ್ತದೆ ಅಂದರೆ ಸರಿ. ಯಾವುದೇ ಆಸ್ತಿಯ ಚೆಕ್ಕುಬಂದಿಯನ್ನು ಬದಲಾಯಿಸಬೇಕಾದರೆ ಪಂಚಾಯತಿಯ ಠರಾವು ಆಗಬೇಕು ಅಂದರೆ ಸರಿ. ನಿಡಿ-2 ರಲ್ಲಿ ಆದ ತಿದ್ದುಪಡಿಯ ಠರಾವಿನ ಬಗ್ಗೆ ನನಗೆ ಗೊತ್ತಿಲ್ಲ.

2. 2012 ಕ್ಕಿಂತ ಮೊದಲು ಆರೋಪಿಯ ಹಸರಿಗೆ ಖಾತೆ ಇತ್ತೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಿದ್ದೀರಾ ಅಂದರೆ ಸಾಕ್ಷಿಯು ಅದನ್ನು ಕಾರ್ಯದರ್ಶಿ ನಿರ್ವಹಿಸುತ್ತಾರೆ ಎಂದು ನುಡಿದಿರುತ್ತಾರೆ. ಆ ಬಗ್ಗೆ ನಾನು ಕಾರ್ಯದರ್ಶಿಯವರನ್ನು ಕೇಳಿಲ್ಲ ಅಂದರೆ ಸರಿ. ನಾನು ನಮೂದಿಸುವಾಗ ಆರೋಪಿ ಖಾತೆ ದಾಖಲು ಮಾಡಿ ಎಂದು ಕೋರಿ ಅರ್ಜಿ ಸಲ್ಲಿಸಿದ್ದನ್ನ ನಾನು ನೋಡಿಲ್ಲ. ಖಾತೆ ದಾಖಲಿಸಲು ಕೋರಿದ ಅರ್ಜಿಯ ಜೊತೆಗೆ ಲಗತ್ತಿಸಿದ ಪೂರಕ ದಾಖಲಾತಿಗಳನ್ನು ಸಹ ನಾನು ನೋಡಿಲ್ಲ. ಆರೋಪಿ ಅರ್ಜಿ ನೀಡಿದ್ದ ಬಗ್ಗೆ ಮತ್ತು ಅದರೊಂದಿಗೆ ದಾಖಲಾತಿ ನೀಡಿದ್ದ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸರಿ. ಆರೋಪಿ ಯಾವುದೇ ಅರ್ಜಿ ನೀಡಿರಲಿಲ್ಲ ಮತ್ತು ಪೂರಕವಾದ ದಾಖಲಾತಿಗಳನ್ನು ನೀಡಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ಕಾರ್ಯದರ್ಶಿಯವರು ಕೆಲಸದ ಒತ್ತಡದ ಸಮಯದಲ್ಲಿ ಕೆಲವೊಂದು ವಹಿಗಳನ್ನು ನಮ್ಮ ಜೊತೆ ಬರೆಸುತ್ತಿದ್ದರು ಎಂದು ನುಡಿಯುತ್ತಾರೆ. ಆ ಸಂಬದರ್ಭದಲ್ಲಿ ಯಾವುದೇ ಪೂರಕ ದಾಖಲಾತಿಗಳನ್ನು ಒದಗಿಸುತ್ತಿರಲಿಲ್ಲ ಅಂದರೆ ಸರಿ. ಯಾವುದೇ ಖಾತೆ ನಿರ್ವಹಿಸುವಾಗ ಪಂಚಾಯತಿಯ ಠರಾವು ಆಗಬೇಕು ಅಂದರೆ ಸರಿ. ನಿಪಿ-8 ರ ಖಾತೆ ದಾಖಲಿಸಿರುವ ಬಗ್ಗೆ ನಾನು ಪಂಚಾಯತಿಯ ಠರಾವನ್ನು ನೋಡಿಲ್ಲ.

3. 1994 ರಿಂದ 2013 ರ ವೇಳೆಯಲ್ಲಿ ಚಾಸಾ-2 ರವರು ಗ್ರಾಮಪಂಚಾಯತಿಯಲ್ಲಿ

ಸದಸ್ಯರಾಗಿ ಕೆಲಸ ಮಾಡುತ್ತಿದ್ದರು ಅಂದರೆ ಸಾಕ್ಷಿಯು ಅವರು ಸದಸ್ಯರಾಗಿದ್ದ ಅವಧಿ ನನಗೆ ಗೊತ್ತಿಲ್ಲ, ಆದರೆ ಅವರು ಪಂಚಾಯತಿಯ ಸದಸ್ಯರಾಗಿದ್ದರು ಎಂದು ನುಡಿಯುತ್ತಾರೆ. ಚಾಸಾ-2 ರವರು ಪಂಚಾಯತಿಯ ಅಧ್ಯಕ್ಷರಾಗಿದ್ದರು ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು, ಕಾರ್ಯದರ್ಶಿಗಳು ಹಾಗೂ ಚಾಸಾ-1 ರವರು ಸೇರಿ ನಿಪಿ-8 ರಂತೆ ಬರವಣಿಗೆ ಮಾಡಿದ್ದೇವೆ ಅಂದರೆ ಸರಿಯಲ್ಲ. ಆ ಬಗ್ಗೆ ಆರೋಪಿಗೆ ಮಾಹಿತಿ ಇರಲಿಲ್ಲ ಅಂದರೆ ಸರಿಯಲ್ಲ. ಖಾತೆ ದಾಖಲಿಸುವಂತೆ ಆರೋಪಿ ಯಾವುದೇ ಸೂಚನೆ ನೀಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶೇಖರ್ ಎಂಬುವವರು ಅವರ ಹಕ್ಕುಪತ್ರದ ಆಸ್ತಿಗೆ ಆರೋಪಿ ಹೆಸರಿಗೆ ಖಾತೆ ದಾಖಲಾಗಿದೆ ಎಂದು ಯಾವುದೇ ಅರ್ಜಿ ನೀಡಿರಲಿಲ್ಲ. ಶೇಖರ್ ಎಂಬುವವರಿಗೆ ನಮ್ಮ ಪಂಚಾಯತಿಯಲ್ಲಿ ಖಾತೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕರ ವಸೂಲಾತಿಗಾಗಿ ಹೋಗುವುದರಿಂದ ಯಾರ ಯಾರ ಹೆಸರಿಗೆ ಖಾತೆ ಇದೆ ಎಂದು ನನಗೆ ಮಾಹಿತಿ ಇರುತ್ತದೆ ಅಂದರೆ ಸಾಕ್ಷಿಯು ಈಗಾಗಲೇ ಹತ್ತು ಹನ್ನೆರಡು ವರ್ಷಗಳಾಗಿರುವುದರಿಂದ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

4. ಚಾಸಾ-3 ರವರು ಅವರ ಆಸ್ತಿಗೆ ಆರೋಪಿಯ ಹೆಸರಿಗೆ ಖಾತೆ ದಾಖಲಿಸಿರುತ್ತಾರೆ ಎಂದು ಅರ್ಜಿ ನೀಡಿದ್ದಾರಾ ಅಂದರೆ ಸಾಕ್ಷಿಯ ನನಗೆ ಆ ರೀತಿಯ ಅರ್ಜಿಗಳು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಗ್ರಾಮಪಂಚಾಯತಿಯಲ್ಲಿ ದೀರ್ಘಾವಧಿ ಕೆಲಸ ಮಾಡಿರುವುದರಿಂದ ವಿದ್ಯಮಾನಗಳು ಗೊತ್ತಿರುತ್ತವೆ ಅಂದರೆ ಸಾಕ್ಷಿಯು ಎಲ್ಲಾ ವಿಚಾರಗಳು ನಮ್ಮ ಗಮನಕ್ಕೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಕಾರ್ಯದರ್ಶಿಗಳು ರಜೆ ಹೋಗುತ್ತಿದ್ದಾಗ ಅವರ ಪ್ರಭಾರವನ್ನು ಬೇರೆ ಕಾರ್ಯದರ್ಶಿಗಳಿಗೆ ಹಾಕುತ್ತಿದ್ದರು. ಪಂಚಾಯತಿಯ ಸಭೆಗಳಲ್ಲಿ ಹಾಜರಿರುತ್ತೀರಾ ಅಂದರೆ ಸಾಕ್ಷಿಯು ಎಲ್ಲಾ ಸಭೆಗಳನ್ನು ಕಾರ್ಯದರ್ಶಿಗಳೇ ಮಾಡುತ್ತಾರೆ, ನಾನು ಅವಶ್ಯಕತೆ ಬಿದ್ದಾಗ ಮಾತ್ರ ಹಾಜರಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರಿಗೆ ಇದ್ದ ಖಾತೆಯನ್ನು ಏಕಾಏಕಿ ಒಮ್ಮೆ ರದ್ದು ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ನಂತರ ಅದನ್ನು ಪುನಃ ಖಾತೆ ದಾಖಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ನಾನು ಚಾಸಾ-1 ಮತ್ತು ಚಾಸಾ-2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ವರ್ಗಾವಣೆಯಾಗುವವರೆಗು ಆರೋಪಿಯಿಂದ ಕಂದಾಯ ವಸೂಲಾತಿ ಮಾಡುತ್ತಿದ್ದೆ ಅಂದರೆ ಸಾಕ್ಷಿಯು ಡಿಮ್ಯಾಂಡ್ ನಲ್ಲಿ ಇರುವ ಹಾಗೆ ವಸೂಲಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಚಾಸಾ-3 ರವರಿಂದ ಕಂದಾಯ ವಸೂಲಿ ಮಾಡುತ್ತಿದ್ದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xxx

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ